**ಹೆಚ್ಚುವರಿ ಸಿವಿಲ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ ಚಿಂಚೋಳಿ**

**ಸಿ.ಸಿ. ನಂ. 298/2018**

| | | | |
|---|---|---|---|
| **ಹೆಸರು** | **:** | **ಸವಿತಾ** | **ದೋ.ಸಾ. 1** |
| **ಗಂಡನ ಹೆಸರು** | **:** | **ಮಂಜುನಾಥ** | **ಫ್ರಾ.ಸಾ. 1** |
| **ವಯಸ್ಸು** | **:** | **30 ವರ್ಷ** | **ದಿನಾಂಕಃ 29-12-2021** |
| **ಉದ್ಯೋಗ** | **:** | **ಗೃಹಿಣಿ** | |
| **ವಾಸಸ್ಥಳ** | **:** | **ಸುಲೇಪೇಟೆ** | |

**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರಿಂದಃ**

ಈ ಪ್ರಕರಣದ ಇಬ್ಬರೂ ಆರೋಪಿತರು ನನಗೆ ಗೊತ್ತು. ಸದರಿಯವರು ನನ್ನ ಬಾಜು ಮನೆಯವರು.

ಈ ಪ್ರಕರಣದ ಸಾಕ್ಷಿದಾರರಾದ ಚಾಸಾ-2 ರಿಂದ 7 ಗೊತ್ತು. ಚಾಸಾ-4 ನನ್ನ ತಾಯಿ, ಚಾಸಾ-5 ನನ್ನ ತಂದೆ, ಚಾಸಾ-2 , 3 , 6 ಮತ್ತು 7 ರವರು ನನ್ನ ಬಾಜು ಮನೆಯವರು.

ದಿನಾಂಕ 11-01-2018 ರಂದು ಸಂಜೆ ಸುಮಾರು 5 ಗಂಟೆಗೆ ನಾನು ನಮ್ಮ ಮನೆಯಗಳದಲ್ಲಿ ಇರುವ ಕಟ್ಟೆಯ ಮೇಲೆ ಕುಳಿತಿದ್ದಾಗ ಈ ಪ್ರಕರಣದ 1 ನೇ ಆರೋಪಿ ರವಿಕುಮಾರ ನನ್ನನ್ನು ಕೆಟ್ಟ ದೃಷ್ಠಿಯಿಂದ ನೋಡುತ್ತಾ ಬಂದವನೇ ನಿನಗೆ ಎಷ್ಟಾದರೂ ರೊಕ್ಕ ಕೊಡುತ್ತೇನೆ ಬಾ ಎಂದು ಕರೆದ, ಆಗ ನಾನು ಚಪ್ಪಲಿ ನೋಡಿದ್ದೀಯಾ ಅಂತಾ ಆತನಿಗೆ ಗದರಿಸಿದೆ. ಆಗ 1 ನೇ ಆರೋಪಿ ರಂಡಿ ನನಗೇ ಚಪ್ಪಲಿ ತೋರಿಸುತ್ತೀಯಾ ಬೈಯ್ಯುತ್ತಾ ನನ್ನ ತಲೆ ಕೂದಲು ಹಿಡಿದು ಎಳೆದಾಡಿದ.

ಆಗ ಅಲ್ಲಿಗೆ ಬಂದ 2 ನೇ ಆರೋಪಿ ರಂಡಿ ಯಾಕೆ ನನ್ನ ಗಂಡನಿಗೆ ಬೈಯ್ಯುತ್ತಿದ್ದೀಯಾ ಅಂತಾ ನನಗೆ ಬೈಯ್ಯುತ್ತಾ ನನ್ನ ಕೂದಲು ಹಿಡಿದು ಎಳೆದಾಡಿ ಆಕೆಯೂ ಕೂಡ ನನಗೆ ಹಿಡಿದು ಹೊಡೆದಳು.

1 ಮತ್ತು 2 ನೇ ಆರೋಪಿತರೊದಿಂಗೆ ಶಿವರಾಯ, ಶ್ರೀಕಾಂತ, ಸುಮಿತ್ರಾ ಎಂಬುವವರೂ ಸಹ ಅಲ್ಲಿಗೆ ಬಂದವರೇ ರಂಡಿ ಸೂಳಿ ಎಂದು ನನಗೆ ಅವಾಚ್ಯ ಶಬ್ದಗಳಿಂದ ಬೈದು ಕೈಕಾಲು ಹಿಡಿದು ನನ್ನನ್ನು ಹಿಡಿದು ಎಳೆದುಕೊಂಡು ಹೋದರು.

ಆರೋಪಿತರು ನನಗೆ ಹೊಡೆದಿದ್ದರಿಂದ ನನ್ನ ಹೊಟ್ಟೆಗೆ ಬೇನೆ ಆಗಿದ್ದರಿಂದ ಸುಲೇಪೇಟೆ ಆಸ್ಪತ್ರೆಗೆ ಹೋದೆ. ಸುಲೇಪೇಟೆ ಆಸ್ಪತ್ರೆಯ ವೈದ್ಯರು ಚಿಂಚೋಳಿಗೆ ಹೋಗಿ ಎಂದು ಹೇಳಿದ್ದರಿಂದ

ನಾನು ಚಿಂಚೋಳಿ ಆಸ್ಪತ್ರೆಗೆ ಅಂಬ್ಯುಲೆನ್ಸ್ ನಲ್ಲಿ ಬಂದಿರುತ್ತೇನೆ.

ನಾನು ಚಿಂಚೋಳಿ ಆಸ್ಪತ್ರೆಯಲ್ಲಿದ್ದಾಗ ಅಲ್ಲಿಗೆ ಪೋಲೀಸ್ ಇನ್ಸ್‌ಪೆಕ್ಟರ್ ಬಂದಿದ್ದರು. ಸದರಿ ಪೋಲಿಸರ ಮುಂದೆ ಆರೋಪಿತರ ವಿರುದ್ಧ ನನ್ನ ಹೇಳಿಕೆಯ ರೂಪದ ದೂರು ಕೊಟ್ಟಿರುತ್ತೇನೆ. ಸದರಿ ದೂರನ್ನು ಈಗ ನೋಡುತ್ತಿದ್ದು ಅದನ್ನೀಗ ನಿಪಿ-1 ಎಂದು ನನ್ನ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು.

ಘಟನೆ ನಡೆದ ಮೂರು ದಿನದ ನಂತರ ಪೋಲೀಸರು ನಮ್ಮ ಮನೆಗೆ ಬಂದು ಘಟನಾ ಸ್ಥಳವನ್ನು ಅಜಮಾಯಿಸಿಕೊಂಡು ಹೋಗಿರುತ್ತಾರೆ.

ನಾನು ಪೋಲೀಸ್ ಠಾಣೆಗೆ ಯಾವತ್ತೂ ಹೋಗಿಲ್ಲ ಮತ್ತು ಪೋಲೀಸರ ಮುಂದೆ ಯಾವುದೇ ಮರುಹೇಳಿಕೆ ಕೊಟ್ಟಿಲ್ಲ.

ನನ್ನನ್ನು ಕೆಟ್ಟ ದೃಷ್ಟಿಯಿಂದ ನೋಡಿದ್ದ ಮತ್ತು ನನ್ನ ಮೇಲೆ ಹಲ್ಲೆ ಮಾಡಿದ 1 ನೇ ಆರೋಪಿ ರವಿಕುಮಾರ ಈ ದಿನ ನ್ಯಾಯಾಲಯದ ಮುಂದೆ ಹಾಜರಿದ್ದು ಅತನನ್ನು ಈಗ ನೋಡಿ ಗುರುತಿಸುತ್ತಿದ್ದೇನೆ. 1 ನೇ ಆರೋಪಿಯ ಹೆಂಡತಿ 2 ನೇ ಆರೋಪಿ ಆಶಾಳನ್ನು ನೋಡಿದರೆ ಗುರುತಿಸುತ್ತೇನೆ.

ಅದೇ ರೀತಿ 1 ಮತ್ತು 2 ನೇ ಆರೋಪಿತರೊಂದಿಗೆ ನನ್ನ ಮೇಲೆ ಹಲ್ಲೆ ಮಾಡಿದ ಶಿವರಾಯ, ಆತನ ಮಗ ಶ್ರೀಕಾಂತ , ಶಿವರಾಯನ ಹೆಂಡತಿ ಸುಮಿತ್ರಾ ಕುರಕುಂಟಾ ಗ್ರಾಮದ ವಾಸಿಗಳಾಗಿದ್ದು , ಘಟನೆ ನಡೆದ ದಿನ ನಮ್ಮ ಊರಿನಲ್ಲೇ ಇದ್ದರು, ಸದರಿ ಮೂವರನ್ನು ಮತ್ತೆ ನೋಡಿದರೆ ಗುರುತಿಸುತ್ತೇನೆ.

**(ಈ ಹಂತದಲ್ಲಿ ತನಿಖಾಧಿಕಾರಿಯವರ ಸರಕಾರಿ ಅಭಿಯೋಜಕರು ಸಾಕ್ಷಿ ,ಈ ಪ್ರಕರಣದ ಇಬ್ಬರು ಆರೋಪಿತರೊಂದಿಗೆ ಇನ್ನೂ ಮೂರು ಜನ ಆರೋಪಿತರು ಸಾಕ್ಷಿಯ ಮೇಲೆ ಹಲ್ಲೆ ಮಾಡಿದ್ದಾರೆಂದು ಸಾಕ್ಷಿ ನುಡಿಯುತ್ತಿರುವುದರಿಂದ ಸದರಿ ವ್ಯಕ್ತಿಗಳನ್ನು ಪ್ರಕರಣದಲ್ಲಿ ಸೇರಿಸಲು ಸೂಕ್ತ ಕ್ರಮ ಕೈಗೊಳ್ಳುವ ಸಲುವಾಗಿ ಮತ್ತು ಸದರಿಯವರನ್ನು ಸಾಕ್ಷಿ ಮುಖಾಂತರ ಗುರುತಿಸುವ ಸಲುವಾಗಿ ಮುಂದುವರೆದ ಮುಖ್ಯ ವಿಚಾರಣೆಯನ್ನು ಮುಂದೂಡುವಂತೆ ಕೋರುತ್ತಾರೆ. ಸಾಕ್ಷಿಯ ಹೇಳಿಕೆ ಪರೀಶಿಲಿಸಿ ಆಕೆಯ ಮುಂದುವರೆದ ಮುಖ್ಯ ವಿಚಾರಣೆಯನ್ನು ಮುಂದೂಡಲಾಯಿತು.)**

**(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

**ಹೆಚ್ಚುವರಿ ಪ್ರ.ದ.ನ್ಯಾ.ದಂ. ಚಿಂಚೋಳಿ**